ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ

# ಸ್ವಾವಲಂಬನೆಗೆ ಜನಸಮೂಹ ಸಂಪರ್ಕ ಕೊಂಡಿ

**ಬೆಂಗಳೂರು:** 21 ನೇ ಶತಮಾನದಲ್ಲಿ ಜನಸಮೂಹದೊಂದಿಗೆ ಸಂಪರ್ಕಗಳನ್ನು ಸೃಷ್ಟಿಸಿಕೊಂಡವರು ಸ್ವಾವಲಂಬಿಯಾಗಿ ಬೆಳೆಯಲು ಅವಕಾಶ ಗಿಟ್ಟಿಸಿಕೊಳ್ಳುತ್ತಾರೆ ಎಂದು ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದ ಮುಖ್ಯಸ್ಥ ನಂದನ್ ನಿಲೇಕಣಿ ಅಭಿಪ್ರಾಯಪಟ್ಟರು.

ಗುರುವಾರ ಜೈನ್ ವಿಶ್ವವಿದ್ಯಾಲಯದಲ್ಲಿ ನಡೆದ 3 ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, 20ನೇ ಶತಮಾನದಲ್ಲಿ ವರ್ಗಶ್ರೇಣಿಯು ಮಾನವನ ಅವಕಾಶಗಳನ್ನು ನಿರ್ಧರಿಸುತ್ತಿತ್ತು. 21 ನೇ ಶತಮಾನದಲ್ಲಿ ಅವಕಾಶಗಳು ಸಂಪರ್ಕಗಳನ್ನು ಆಧರಿಸಿ ಸೃಷ್ಟಿಯಾಗುತ್ತಿದೆ. ಜನಸಮುದಾಯದೊಂದಿಗೆ ಹೆಚ್ಚಿನ ಸಂಪರ್ಕ ಹೊಂದಿದಷ್ಟೂ ಅವಕಾಶಗಳು ಹೆಚ್ಚಾಗುತ್ತದೆ. ಶಿಕ್ಷಣ ಸಂಸ್ಥೆಗಳಿಂದ ಹೊರಬರುವ ವಿದ್ಯಾರ್ಥಿಗಳು ಸಂಪರ್ಕ ಬೆಳೆಸಿಕೊಳ್ಳುವ ಮೂಲಕ ಔದ್ಯೋಗಿಕ ಹಾಗೂ ನಂತರದ ಅವಕಾಶಗಳನ್ನು ಪಡೆಯಬೇಕು. ಸಂಪರ್ಕ ಸಂಗ್ರಹಿಸಲು ಶ್ರಮ ಪಡಬೇಕಾಗಿದ್ದು, ಯಾವುದೇ ಕ್ಷೇತ್ರದಲ್ಲಿ ಏಕಾಂಗಿಯಾಗಿ ಬದುಕದೆ ಗುಂಪುಗಳ ಮೂಲಕ ಅಭಿವೃದ್ಧಿ ಕಾಣಬೇಕು ಎಂದು ಕಿವಿಮಾತು ಹೇಳಿದರು.

ಸಂಪರ್ಕವು ವ್ಯಕ್ತಿಯನ್ನು ಪರಿಣತನನ್ನಾಗಿ ಮಾಡುತ್ತದೆ. ವಕೀಲ, ವೈದ್ಯ, ಇಂಜಿನಿಯರ್, ವಿಜ್ಞಾನಿ ಮೊದಲಾದ ಸಮಾಜದ ಔದ್ಯೋಗಿಕ ವರ್ಗಗಳು ಸಂವಹನಕ್ಕಾಗಿ ದೊರೆಯುತ್ತವೆ. ಸಂವಹನವನ್ನು ಬಳಸಿ ಬೆಳವಣಿಗೆಯಾದ ಅನೇಕ ಸಂಸ್ಥೆಗಳು ಹಾಗೂ ವ್ಯಕ್ತಿಗಳಿದ್ದಾರೆ. ಅದೃಷ್ಟಮಾತ್ರವಲ್ಲದೆ ಅವಕಾಶಗಳ ಬೆನ್ನುಹತ್ತಿದರೆ ಮಾತ್ರ ಅಭಿವೃದ್ಧಿ ಸಾಧ್ಯ. ಸಣ್ಣ




ನಿರ್ಧಾರಗಳು ಬದುಕಿನ ದೊಡ್ಡ ತಿರುವುಗಳನ್ನು ನಿರ್ಧರಿಸಲಿದ್ದು, ಜನರೊಂದಿಗೆ ಸಂವಹನದ ಅವಕಾಶ ಸಿಕ್ಕಾಗ ವೃತ್ತಿಯ ಭಾಗವೆಂದು ಪರಿಗಣಿಸಬಾರದು ಎಂದು ಹೇಳಿದರು.

ಶಾಲಾ ಜೀವನದಲ್ಲಿ ನಾನು ಟೇಬಲ್ ಟೆನ್ನಿಸ್‌ನಲ್ಲಿ ಪರಿಣತನಾಗಿದ್ದು, ಓದಿನಲ್ಲಿ ಹಿಂದುಳಿದಿದ್ದೆ. ಪಠ್ಯಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಪಠ್ಯೇತರ ಚಟುವಟಿಕೆಗಳಿಗೆ ಗಮನ ನೀಡುತ್ತಿದ್ದೆ. ಟೆನ್ನಿಸ್ ಕ್ರೀಡೆಯಲ್ಲೂ ಎದುರಾಳಿಯನ್ನು ಗಮನಿಸದೆ ಮೊದಲು ನನ್ನಲ್ಲೇ ಇರುವ ಸವಾಲುಗಳನ್ನು ಬಗೆಹರಿಸಿಕೊಳ್ಳುತ್ತಿದ್ದೆ. ಇಂದಿನ ಯುವಜನತೆ ಉದ್ಯೋಗ ದೊರೆಯದಿದ್ದಾಗ ತಮ್ಮ ವಿರೋಧಿಗಳ ಬಗ್ಗೆ ಚಿಂತಿಸುತ್ತಾರೆ. ಆದರೆ ಮೊದಲು ತಮ್ಮಲ್ಲಿನ ಸಮಸ್ಯೆ ನಿವಾರಿಸಿ ಸಬಲರಾದರೆ ಉದ್ಯೋಗಾವಕಾಶ ತಾನಾಗೇ ಬರುತ್ತದೆ ಎಂದರು. ಘಟಿಕೋತ್ಸವದಲ್ಲಿ ಸ್ನಾತಕೋತ್ತರ ಹಾಗೂ ಪದವಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಎಂ.ಫಿಲ್ ಗಣಿತಶಾಸ್ತ್ರದಲ್ಲಿ ಜೆ.ಮಾನಸ, ಎಂ.ಎ ಅರ್ಥಶಾಸ್ತ್ರದಲ್ಲಿ ಶ್ರುತಿ ಜಾಧವ್, ಎಂ.ಎ ಸಂಗೀತದಲ್ಲಿ ಎಂ.ಡಿ.ಶುಭ, ಎಂ.ಎ ನೃತ್ಯ ವಿಭಾಗದಲ್ಲಿ ಮಧುಲಿಕಾ ಆಚಾರ್ಯ ಸೇರಿದಂತೆ 23 ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಹಾಗೂ ಅಂಜು ಆನಂದ್, ವಂದ್ಯ ಭಟ್, ಎಂ.ಬಿ.ಪ್ರಿಯಾಂಕ, ಬಿ.ವಿ.ಶ್ರೀರಕ್ಷ, ಪ್ರಶಾಂತ್ ಶರ್ಮ ಸೇರಿದಂತೆ 17 ಪದವಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ವಿ.ವಿ ಕುಲಪತಿ ಡಾ.ಸಿ.ಜಿ.ಕೃಷ್ಣದಾಸ್ ನಾಯರ್, ಟ್ರಸ್ಟ್‌ನ ಅಧ್ಯಕ್ಷ ಡಾ.ಚೆನ್‌ರಾಜ್ ರಾಯ್‌ಚಂದ್ ಉಪಸ್ಥಿತರಿದ್ದರು.

■ ಆಧಾರ್ ಪ್ರಾಧಿಕಾರದ ಮುಖ್ಯಸ್ಥ ನಿಲೇಕಣಿ ಅಭಿಮತ